ಅವರನ್ನು ಯಾವುದೇ ಪ್ರಶ್ನೆ ಕೇಳುವಂತಿಲ್ಲ. ಇನ್ಶೂರೆನ್ಸ್ ಇದೆಯಾ, ಆಸ್ಪತ್ರೆಯ ನಿಯಮಗಳೇನು? ಇವೆಲ್ಲ ಮುಖ್ಯವಲ್ಲ. ಮೊದಲು ರೋಗಿಯನ್ನು ಉಪಚರಿಸಬೇಕು. ರೋಗಿಯ ಪರಿಸ್ಥಿತಿ ಸ್ಟೇಬಲ್ ಆಗಿದ್ದಾಗ, ಅವರೊಂದಿಗೆ ಕೂತು ಮಾತನಾಡುವ ಸಂದರ್ಭ ದೊರೆತಾಗ ಕಥೆಗಳು ಹೊಳೆಯುತ್ತವೆ. ಪ್ರತಿ ರೋಗದೊಂದಿಗೂ ಒಂದು ಕಥೆ ಇರುತ್ತದೆ. ನನ್ನ ವೈದ್ಯಕೀಯ ವೃತ್ತಿ ನನ್ನ ಕಥೆ–ಕಾದಂಬರಿಗೆ ಸಾಕಷ್ಟು ವಸ್ತು ಕೊಡುತ್ತದೆ. ಚಿಕಿತ್ಸೆ ಮಾಡಿ ಬಂದ ನಂತರ ಆ ಘಟನೆಗಳಿಗೆ ಪ್ರತಿಕ್ರಿಯಿಸುವುದು ಹೇಗೆ ಎಂದು ಯೋಚಿಸುತ್ತೇನೆ. ಬರವಣಿಗೆ ನನಗೆ ಥೆರಪಿ ಇದ್ದಂತೆ. ಬರೆಯುತ್ತಾ ಬರೆಯುತ್ತಾ ಹೋದಂತೆ ನಾನು ಭೇಟಿಯಾದ ವ್ಯಕ್ತಿಗಳ ಜೊತೆ ನಾನು ನಡೆದುಕೊಳ್ಳುತ್ತಿರುವ ರೀತಿ ಸರಿ ಇದೆಯೇ ಇಲ್ಲವೇ ಎಂದು ಕೇಳಿಕೊಳ್ಳುವುದು ಸಾಧ್ಯವಾಗುತ್ತದೆ.

ಒಂದು ಘಟನೆ ನೆನಪಿಗೆ ಬರುತ್ತಿದೆ. ಒಮ್ಮೆ ಇಪ್ಪತ್ತು ವರ್ಷದ ಒಬ್ಬ ಹುಡುಗ ಬಂದ, ಮಿನೆಸೋಟಾದವನು. ನಮ್ಮ ಆಸ್ಪತ್ರೆಯಲ್ಲಿನ ರಿಸೆಪ್ಷನಿಸ್ಟ್ ಸೂಡಾನಿನವಳು. ಹೊಟ್ಟೆನೋವಿನಿಂದ ಬಂದಿದ್ದ ಅವನನ್ನು ಉಪಚರಿಸಿದ ನರ್ಸ್ ಕೊರಿಯನ್ ಯುವತಿ. ಆದರೆ ಅವಳು ಅಮೆರಿಕದಲ್ಲಿಯೇ ಹುಟ್ಟಿ ಬೆಳೆದವಳು. ಇನ್ನು ಯುವಕನಿಗೆ ಚಿಕಿತ್ಸೆ ನೀಡಬೇಕಾದ ನಾನು ಇಂಡಿಯನ್ ಡಾಕ್ಟರ್. ರೋಗಿಯ ವಿವರಗಳನ್ನು ದಾಖಲಿಸಿಕೊಳ್ಳುವ ವ್ಯಕ್ತಿ ಸೋಮಾಲಿಯನ್. ಇದು ಅಲ್ಲಿನ ಪರಿಸ್ಥಿತಿ. ಅಪೆಂಡಿಸೈಟಿಸ್ ಆಗಿದ್ದ ಹುಡುಗನಿಗೆ ಶಸ್ತ್ರಚಿಕಿತ್ಸೆ ಮಾಡಬೇಕಾದ ಸರ್ಜನ್ ನೈರೋಬಿಯವನು. ನಾನು ಎಷ್ಟು ಹೇಳಿದರೂ ಆ ಹುಡುಗ ಅಪೆಂಡಿಸೈಟಿಸ್ ಎಂದು ನಂಬಲು ಸಿದ್ಧವಿಲ್ಲ. ‘ಅಮೆರಿಕನ್ ಡಾಕ್ಟರ್ ಬೇಕು’ ಎಂದ. ‘ಅಮೆರಿಕನ್ ಡಾಕ್ಟರ್ ಎಂದರೆ ಏನು? ನಮ್ಮೆಲ್ಲರಿಗೂ ಅಮೆರಿಕನ್ ಪೌರತ್ವ ಇದೆ’ ಎಂದೆ. ಅವನು ಸಿಡುಕುತ್ತಾ ಐವಿಯೊಂದಿಗೆ ಅಲ್ಲಿಂದ ಹೊರಹೋಗಲು ಓಡಿದ. ನರ್ಸ್ ಕೂಗಿಕೊಂಡಳು. ರೋಗಿಯನ್ನು ಅಟ್ಟಿಸಿಕೊಂಡು ಹೋಗಿ ಹಿಡಿದಿದ್ದು ಸೋಮಾಲಿಯನ್ ಸೆಕ್ಯುರಿಟಿ. ಆಗ ಆ ಯುವಕ ಗೊಣಗಿದ್ದು – ‘ಕನಿಷ್ಠ ಸೆಕ್ಯುರಿಟಿಯಾದರೂ ಬಿಳಿಯ ಆಗಿರಬಾರದಾ?’ ಕಥೆಗೆ ವಸ್ತುಗಳು ದೊರಕುವುದು ಇಂಥ ಪ್ರಸಂಗಗಳಲ್ಲಿ.

**● ಬರವಣಿಗೆಯ ನಂಟು ಶುರುವಾಗಿದ್ದು ಹೇಗೆ?**

ಕಾಲೇಜಿನಲ್ಲಿದ್ದಾಗ ಸಣ್ಣಪುಟ್ಟ ಬರವಣಿಗೆ ಮಾಡಿಕೊಂಡಿದ್ದೆ. ವಾಲ್ ಜರ್ನಲ್‌ನಲ್ಲಿ ಬರೆಯುತ್ತಿದ್ದೆ. ಸೀರಿಯಸ್ ಆಗಿ ಬರೆಯುತ್ತೇನೆ ಎಂದುಕೊಂಡಿರಲಿಲ್ಲ. ‘ಮಧ್ವವಿಜಯ’ ಮೊದಲು ಬರೆದ ಕಥೆ.

